**ಬಿಲೀವರ್ಸ್ ಈಸ್ಟರ್ನ್ ಚರ್ಚ್**

# ಕುರುಬನ ಪತ್ರ

**ನವಂಬರ್/ಡಿಸಂಬರ್ 2023**

**ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ, ಎಲ್ಲಾ ಆರ್ಚ್‌ಬಿಷಪ್‌ರವರಿಗೂ, ಬಿಷಪ್‌ರವರಿಗೂ, ಯಾಜಕರಿಗೂ, ಡೀಕನ್ ಫಾದರ್ಸ್, ಸುವಾರ್ತಾಬೋಧಕರು, ಆರ್ಡರ್ ಆಫ್ ಸಿಸ್ಟರ್‌ರವರಿಗೂ ಹಾಗು ವಿಶ್ವದಾದ್ಯಂತವಿರುವ ಬಿಲೀವರ್ಸ್ ಈಸ್ಟರ್ನ್ ಚರ್ಚ್‌ನ ಎಲ್ಲಾ ನಂಬಿಗಸ್ತರಿಗೂ ಆಶೀರ್ವಾದಗಳು ಮತ್ತು ಶುಭಾಶಗಳು. ಆಮೆನ್!**

**ಕ್ರಿಸ್ತನಲ್ಲಿ ಪ್ರೀಯರೇ,**

ನಾವು ನವಂಬರ್ ಅಂತ್ಯವನ್ನು ಸಮೀಪಿಸುತ್ತಿರುವಾಗ ಮತ್ತು ಡಿಸಂಬರ್ ತಿಂಗಳನ್ನು ಸ್ವಾಗತಿಸಲು ತಯಾರಿ ನಡೆಸುತ್ತಿರುವಾಗ, ಈ ಎರಡು ತಿಂಗಳ ಮಹತ್ವವನ್ನು ನಾವು ನೆನಪಿಸಿಕೊಳ್ಳುವುದು ಬಹಳ ಪ್ರಾಮುಖ್ಯವಾಗಿದೆ. ನವಂಬರ್ ತಿಂಗಳಿನಿಂದ ಲಿಟರ್ಜಿಕಲ್ ವರ್ಷದ ಆರಂಭವನ್ನು ಸೂಚಿಸುತ್ತದೆ, ಆದರೆ ಡಿಸಂಬರ್‌ನಲ್ಲಿ ಲಿಟರ್ಜಿಕಲ್ ಕ್ಯಾಲೆಂಡರ್‌ನಲ್ಲಿನ ಪ್ರಮುಖ ಘಟನೆಗಳಲ್ಲಿ ಒಂದನ್ನು ಸ್ಮರಿಸುವ ಸಮಯವಾಗಿದೆ: **ಕ್ರಿಸ್ತನ ಜನನ** [ನೇಟಿವಿಟಿ].

ನಮಗೆ, ದೇವರ ಜನರಾಗಿ ನಮ್ಮ ಜೀವನವು ನಾವು ಅನುಸರಿಸುವ ಸಾಮಾನ್ಯ ಕ್ಯಾಲೆಂಡರ್‌ಗಿಂತ ಹೆಚ್ಚಾಗಿ ಚರ್ಚ್ ಕ್ಯಾಲೆಂಡರ್ ಸುತ್ತ ಸುತ್ತುತ್ತದೆ. ಕ್ರಿಸ್ತನಲ್ಲಿ ನಮ್ಮ ಜೀವನವನ್ನು ಹೆಚ್ಚಿಸಲು ಈ ನೂತನ ಲಿಟರ್ಜಿಕಲ್ ವರ್ಷದಲ್ಲಿ ಬದ್ಧತೆಗಳನ್ನು ಮಾಡುವುದು ಪ್ರಾಮುಖ್ಯವಾಗಿದೆ. ನಮ್ಮಲ್ಲಿ ಕೆಲವರು ದೈನಂದಿನ ವಾಕ್ಯವನ್ನು ಓದುವುದು, ಕುಟುಂಬವಾಗಿ ಪ್ರಾರ್ಥಿಸುವುದು, ದೈನಂದಿನ ಪಶ್ಚಾತ್ತಾಪ ಪಡುವುದು, ಕರ್ತನಿಗೆ ದಶಮಭಾಗಗಳನ್ನು ಕೊಡುವುದು, ಚರ್ಚ್ ಕ್ಯಾಲೆಂಡರ್ ಮತ್ತು ಅದರ ಘಟನೆಗಳನ್ನು ಗಮನಿಸುವುದು, ಇತರರನ್ನು ನೋಡಿಕೊಳ್ಳುವುದು ಮುಂತಾದ ಶಿಸ್ತನ್ನು ಬೆಳಸಿಕೊಳ್ಳಬೇಕಾಗಬಹುದು ಮತ್ತು ಪಟ್ಟಿಯು ಮುಂದುವರಿಯಬಹುದು.

ಈ ಆಧ್ಯಾತ್ಮಿಕ ಶಿಸ್ತುಗಳಿಗೆ ನಂಬಿಗಸ್ತಿಕೆಯಿಂದ ನಿಮ್ಮನ್ನು ತೊಡಗಿಸಿಕೊಳ್ಳಲು ಮತ್ತು ಅವುಗಳನ್ನು ನಿಮ್ಮ ಜೀವನದ ಭಾಗವನ್ನಾಗಿ ಮಾಡುವಲ್ಲಿ ಸ್ಥಿರವಾಗಿರಲು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ಈ ಎಲ್ಲದಕ್ಕೂ ಕೀಲಿಕೈ, ಚರ್ಚ್ ಕ್ಯಾಲೆಂಡರನ್ನು ನಂಬಿಗಸ್ತಿಕೆಯಿಂದ ಅನುಸರಿಸುವುದು, ಇದು ನಿಮಗೆ ಹೆಚ್ಚು ಸುಲಭವಾಗಿರುತ್ತದೆ. ನಿಮ್ಮ ಆಧ್ಯಾತ್ಮಿಕ ಜೀವನವನ್ನು ರೂಪಿಸಲು ಚರ್ಚ್ ಉದ್ದೇಶಪೂರ್ವಕವಾಗಿ ವಿನ್ಯಾಸಗೊಳಿಸಿದ ಎಲ್ಲಾ ಉಪವಾಸಗಳು ಮತ್ತು ಆಚರಣೆಗಳನ್ನು [ಹಬ್ಬಗಳು] ಈ ಕ್ಯಾಲೆಂಡರ್ ಒಳಗೊಂಡಿದೆ. ಚರ್ಚ್ ಕ್ಯಾಲೆಂಡರ್ ಅನ್ನು ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತರ ಭೂಲೋಕ ಜೀವನದ ಪ್ರಮುಖ ಘಟನೆಗಳನ್ನು ಸ್ಮರಿಸುವ ರೀತಿಯಲ್ಲಿ ಆಯೋಜಿಸಲಾಗಿದೆ, ಇದು ಕ್ರಿಸ್ತನ ಜನನದ ಘೋಷಣೆಯ ಋತುವಿನಿಂದ ಪ್ರಾರಂಭವಾಗುತ್ತದೆ, ಇದರ ಮುಖ್ಯಾಂಶವೆಂದರೆ "ಕ್ರಿಸ್‌ಮಸ್" ಆಚರಣೆಯಾಗಿದೆ.

ಕ್ರಿಸ್‌ಮಸ್ ಭರವಸೆ, ಶಾಂತಿ ಮತ್ತು ಸಂತೋಷದ ಪ್ರಬಲ ಸಂದೇಶವನ್ನು ಹೊಂದಿದೆ. ದೇವರ ಅಗಾಧವಾದ ಪ್ರೀತಿ ಮತ್ತು ರಕ್ಷಣೆಯ ಕ್ರಿಯೆಯ ಕುರಿತು ಪ್ರತಿಬಿಂಬಿಸಲು ಇದು ನಮಗೆ ಸಹಾಯ ಮಾಡುತ್ತದೆ. ಜನನದ ರಾತ್ರಿಯಲ್ಲಿ ಕುರುಬರಿಗೆ ದೇವದೂತನು ಮಾಡಿದ ಘೋಷಣೆಯು ಈ ಭಾವನೆಯನ್ನು ಸಂಪೂರ್ಣವಾಗಿ ಸೆರೆಹಿಡಿಯುತ್ತದೆ: "ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನೆಂದರೆ. ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ!" [ಸಂತ ಲೂಕ 2:10–11].

ದೇವದೂತನು ಘೋಷಿಸಿದಂತೆ, ಈ ಸುದ್ಧಿಯು ನಮ್ಮನ್ನೂ ಒಳಗೊಂಡಂತೆ ಎಲ್ಲರಿಗೂ ಮೀಸಲಾಗಿದೆ, ಮತ್ತು ಇದು ನಮ್ಮ ಹೃದಯಗಳನ್ನು ಸಂತೋಷ ಮತ್ತು ಭರವಸೆಯಿಂದ ತುಂಬುತ್ತದೆ. ದೇವರು ನಮ್ಮ ಮಾನವ ಇತಿಹಾಸವನ್ನು ಪ್ರವೇಶಿಸಿ

ಇಮ್ಯಾನುಯೆಲ್ ಆಗಿದ್ದಾರೆ.

ವಾಕ್ಯವು ಹೇಳುವಂತೆ, ದೇವರು ನಮ್ಮೊಂದಿಗಿದ್ದಾನೆ, "ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು" [ಸಂತ ಯೋಹಾನ 1:14] ದೇವದೂತರು ಮತ್ತು ಕುರುಬರು ಕ್ರಿಸ್ತನ ಜನನದ ಸುವಾರ್ತೆಯನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಲಿಲ್ಲ, ಆದರೆ ಅವರು ತಾವು ಕಂಡ ಸತ್ಯವನ್ನು ಮತ್ತು ತಮ್ಮ ಅನುಭವಗಳನ್ನು ಇತರರಿಗೆ ರವಾನಿಸಿದರು. ಈ ಕ್ರಿಸ್‌ಮಸ್‌ನ ಋತುವಿನಲ್ಲಿ, ಸಂತೋಷ ಮತ್ತು ಆಚರಣೆಯು ಪ್ಯಾರಿಷ್‌ನ ಗೋಡೆಗಳು, ಮನೆಗಳು ಮತ್ತು ನಮ್ಮ ಹೃದಯಗಳನ್ನು ಮೀರಿ ವಿಸ್ತರಿಸಲಿ ಮತ್ತು ನಾವು ಭಾಗವಾಗಿರುವ ಸಮುದಾಯಕ್ಕೆ ವಿಸ್ತರಿಸಲಿ.

ಕ್ರಿಸ್‌ಮಸ್ ದಿನಕ್ಕೆ ಮುಂಚಿತವಾಗಿ, ವಿಶ್ವದಾದ್ಯಂತವಿರುವ ಸಾಂಪ್ರದಾಯಿಕ ಕ್ರೈಸ್ತರು ನೇಟಿವಿಟಿ ಅಥವಾ ಕ್ರಿಸ್‌ಮಸ್ ಉಪವಾಸವನ್ನು ಆಚರಿಸುತ್ತಾರೆ – ಈ ಅವಧಿಯು ದೇವರ ಮಗನು ನರಾವತಾರವನ್ನು ಧರಿಸಿಕೊಂಡು ನಮ್ಮಲ್ಲಿ ಒಬ್ಬನಾಗುವ ಅದ್ಭುತ ಪವಾಡದ ಬಗ್ಗೆ ಪ್ರಾರ್ಥನಾ ಪೂರ್ವಕವಾಗಿ ಧ್ಯಾನಿಸಲು ನಮಗೆ ಸಹಾಯಮಾಡುತ್ತದೆ. ಈ ಉಪವಾಸದ ಸಮಯದಲ್ಲಿ, ಕ್ರಿಸ್ತನು ನಮ್ಮಂತೆ ಆದಂತೆಯೇ, ನಾವು ಅವನಂತೆ ಆಗಲು ಆಂತರಿಕವಾಗಿ ಮತ್ತು ಬಾಹ್ಯವಾಗಿ ನಮ್ಮನ್ನು ಸಿದ್ಧಪಡಿಸಿಕೊಳ್ಳುತ್ತೇವೆ. ಇದು ನಮ್ಮ ಕರ್ತನಾದ ಯೇಸುಕ್ರಿಸ್ತನಿಗೆ ನಮ್ಮ ಬದ್ಧತೆಯನ್ನು ನವೀಕರಿಸುವ ಒಂದು ಆಹ್ವಾನವಾಗಿದೆ – ನಮ್ಮ ಜೀವನದಲ್ಲಿ ಸಮತೋಲನ, ಶಾಂತಿ ಮತ್ತು ಪರಿಶುದ್ಧತೆಯನ್ನು ಪುನಃ ಸ್ಥಾಪಿಸುವ ಸಮಯವಾಗಿದೆ.

ಆಗಾಗ್ಗೆ, ನಾವು ಉಪವಾಸವನ್ನು ಕೇವಲ ಆಹಾರದಿಂದ ದೂರವಿರುವುದು ಎಂದು ಭಾವಿಸುತ್ತೇವೆ. ಆದರೆ ಸಂತ ಜಾನ್ ಕ್ರಿಸೊಸ್ಟೊಮ್ ನಮಗೆ ಬುದ್ಧಿವಾದ ಹೇಳುತ್ತಾನೆ, "ಉಪವಾಸವು ಆಹಾರದಿಂದ ದೂರವಿರುವುದನ್ನು ಮಾತ್ರ ಒಳಗೊಂಡಿದೆ ಎಂದು ಭಾವಿಸುವುದು ತಪ್ಪು; ನಿಜವಾದ ಉಪವಾಸವು ದುಷ್ಟತನದಿಂದ ದೂರವಾಗುವುದಾಗಿದೆ." ಆದ್ದರಿಂದ ಆಹಾರದಿಂದ ಉಪವಾಸ ಮಾಡುವಾಗ ಪಾಪ, ವದಂತಿ, ಅಸೂಯೆ, ಕೋಪ ಮತ್ತು ನಾವೆಲ್ಲರೂ ನಮ್ಮನ್ನು ನಿಯಂತ್ರಿಸಲು ಆಗಾಗ್ಗೆ ಅನಿಮತಿಸುವ ವಿಷಯಗಳಿಂದ ಉಪವಾಸ ಮಾಡಲು ಸಹ ನಮಗೆ ಸವಾಲು ಹಾಕಲಾಗುತ್ತದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಒಂದು ಚರ್ಚ್ ಆಗಿ, ಚರ್ಚ್ ಕ್ಯಾಲೆಂಡರ್ ಮತ್ತು ಅದರ ವಿವಿಧ ಅಂಶಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಕ್ರಿಸ್ತನ ಒಂದು ದೇಹವಾಗಿ ಬದುಕಲು ಈ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳೋಣ. ಈ ಹೊಸ ಲಿಟರ್ಜಿಕಲ್ ವರ್ಷವು ಕ್ರಿಯೆಗೆ, ಚರ್ಚ್ ಗೋಡೆಗಳನ್ನು ಮೀರಿಹೋಗಲು, ಪ್ಯಾರಿಷ್‌ಗಳು ಮಿಷನ್‌ನಲ್ಲಿ ಅಭಿವೃದ್ಧಿ ಹೊಂದಲು ಮತ್ತು ನಮ್ಮ ಕರ್ತನಾದ ಯೇಸುಕ್ರಿಸ್ತನಂತೆ ಆಗಲು ಕರೆ ನೀಡಲಿ!.

ಸರ್ವಶಕ್ತನಾದ ದೇವರ ಶಾಂತಿಯು ಮತ್ತು ಕೃಪೆಯು ನಿಮ್ಮೊಂದಿಗೆ ಎಂದೆಂದಿಗೂ ಶಾಶ್ವತವಾಗಿ ನೆಲೆಯಾಗಿರಲಿ!

ಪವಿತ್ರ ಚರ್ಚ್‌ನ ಸೇವೆಯಲ್ಲಿ,

ಕ್ರಿಸ್ತನಲ್ಲಿ ನಿಮ್ಮ ತಂದೆ,

**26–11–2023**

ಅಥನೇಷಿಯಸ್ ಯೋಹಾನ್ ಪ್ರಥಮ ಮೆಟ್ರೋಪಾಲಿಟನ್

***ಬಿಲೀವರ್ಸ್ ಈಸ್ಟರ್ನ್ ಚರ್ಚ್ ಪವಿತ್ರ ಸಿನೋಡ್, ಸಂತ ಥಾಮಸ್ ಸಮುದಾಯ, ತಿರುವಲ್ಲ, ಕೇರಳ, ಭಾರತ – 689103***